**ಅಧ್ಯಕ್ಷರು :** ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಒಂದು ಸೂಚನೆ ಕೊಟ್ಟಿದ್ದಾರೆ. ಆದರೂ ಕೂಡ ನಿಯಮಗಳಿಗೆ ಗೌರವ ಕೊಟ್ಟು ಪ್ರಶ್ನೋತ್ತರದ ನಂತರ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಈಗ ದಯಮಾಡಿ ಪ್ರಶ್ನೋತ್ತರ ಮುಗಿಸೋಣ. ಈಗ ಪ್ರಶ್ನೋತ್ತರ. ಇದು ಅಧಿಕೃತ ಕಲಾಪ ಅಲ್ಲ. ಇದು ನಡವಳಿಕೆಗಳಲ್ಲಿ ಬರುವುದಿಲ್ಲ. ಇದುವರೆಗೂ ನಡೆದದ್ದು ಅಫಿಷಿಯಲ್ ಪ್ರೊಸೀಡಿಂಗ್ಸ್‌ನಲ್ಲಿ ಬರುವುದಿಲ್ಲ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಈಗ ಇಲ್ಲಿ ಅಫಿಷಿಯಲ್ ಪ್ರೊಸೀಡಿಂಗ್ಸ್ ಅಲ್ಲದೇ ಇರುವ ಘಟನೆಗಳು ಯಾವ್ಯಾವುದು ನಡೆದಿವೆ ಅದ್ಯಾವುದಕ್ಕೂ ಕೂಡ ತಾವು ಮಹತ್ವ ಕೊಡಬಾರದು ಎಂದು ಪತ್ರಿಕಾ ಪ್ರತಿನಿಧಿಗಳಾದ ತಮ್ಮಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಯಾವ ಕಾರಣಕ್ಕೆ ಇಂಥವು ನಡೆಯುತ್ತವೆ ಎಂದು ನಮಗೆ ಗೊತ್ತಾಗಿದೆ. ದಯಮಾಡಿ ನೀವು ನಮ್ಮ ಜೊತೆ ಸಹಕರಿಸಬೇಕು. ಇಲ್ಲಿ ನಡೆದಿರತಕ್ಕಂಥ ಯಾವುದೇ ಘಟನೆಗಳು ನಾಳೆ ಪ್ರಚಾರ ಆಗಕೂಡದು ಎಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ.

**ಶ್ರೀ ಎಂ. ವೀರಪ್ಪ ಮೊಯಿಲಿ :** ಮಾನ್ಯ ಅಧ್ಯಕ್ಷರೇ, ವಿಡಿಯೋಗ್ರಾಫ್ ಮಾಡಿದ್ದಾರೆ. ಅದನ್ನೂ ಕೂಡ ಪಬ್ಲಿಷ್ ಮಾಡಬಾರದು ಎಂದು ತಾವು ಆದೇಶ ಕೊಡಿ. ಇಲ್ಲದಿದ್ದರೆ ಇದೇ ಉತ್ತೇಜನವಾಗುತ್ತದೆ.

**MR. SPEAKER :** I know the object. It will not be published. It cannot be used for broadcasting.

**2 ಪ್ರಶ್ನೋತ್ತರಗಳು**

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

ರಾಜ್ಯದಲ್ಲಿ ಪರಿಸರ ಮಾಲಿನ್ಯ ತಡೆಗಟ್ಟುವ ಬಗ್ಗೆ

223(1555) :

**ಶ್ರೀ ಎಸ್.ಪಿ. ಮುದ್ದಹನುಮೇ ಗೌಡ** (ಕುಣಿಗಲ್) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಮತ್ತು ಪರಿಸರ, ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ?

ಆ) ಯಾವ ಯಾವ ವಿಧದಲ್ಲಿ ಪರಿಸರ ಮಾಲಿನ್ಯ ಉಂಟಾಗುತ್ತದೆ.

**ಶ್ರೀ ಎ.ಬಿ. ಪಾಟೀಲ್ (ಗಣಿ ಮತ್ತು ಭೂ ವಿಜ್ಞಾನ ಮತ್ತು ಪರಿಸರ ಜೀವಿಶಾಸ್ತ್ರ ಸಚಿವರು):**

ಅ) ಪರಿಸರ ಇಲಾಖೆಯಡಿ ಬರುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಮತ್ತು ವಾಯು ಮಾಲಿನ್ಯ (ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981ಪರಿಸರ ಸಂರಕ್ಷಣೆ ಕಾಯ್ದೆ 1986 ಇದರ ಕೆಲವು ಅನುಬಂಧಗಳನ್ನು ಅನುಷ್ಠಾನಗೊಳಿಸುತ್ತಿದೆ. ಮಂಡಳಿಯು ಈ ಕಾಯ್ದೆಗಳಡಿಯಲ್ಲಿ ಕಲುಷಿತ ನೀರು :ವಾಯು ಮಾಲಿನ್ಯಕಾರಕಗಳ ವಿಸರ್ಜನೆಯ ಗುಣ ಮಟ್ಟವನ್ನು ನಿಗಧಿಪಡಿಸಿ ಮಾಲಿನ್ಯವನ್ನು ನಿಯಂತ್ರಿಸುತ್ತದೆ.

ರಾಜ್ಯದಲ್ಲಿ ಪರಿಸರ ಸಂರಕ್ಷಣೆಗೆ ಕೆಳಕಂಡ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

1. ಜಲ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಕಾಯ್ದೆ ಹಾಗೂ ಪರಿಸರ ಸಂರಕ್ಷಣೆ ಕಾಯಿದೆ ಅಡಿಯಲ್ಲಿ ಕ್ರಮಗಳನ್ನು ಜರುಗಿಸಲಾಗುತ್ತಿದೆ.
2. ಪರಿಸರ ವಿಮೋಚನೆ ಪತ್ರಗಳನ್ನು ಹೊಸ ಯೋಜನೆಗಳಿಗೆ ನೀಡುವುದು ಅಲ್ಲಿ ಪರಿಸರ ಆಘಾತ ಅಂದಾಜು ಹಾಗೂ ಪರಿಸರ ಸಾರ್ವಜನಿಕ ಸಭೆಗಳನ್ನು ನಡೆಸಲಾಗುತ್ತಿದೆ. ಹೊಸ ಉದ್ದಿಮೆಗಳು ಜಲ ಮತ್ತು ವಾಯು ಮಾಲಿನ್ಯ ನಿಯಂತ್ರಣ ಘಟಕಗಳನ್ನು ಅಳವಡಿಸಿದ ಮೇಲೆ, ಉದ್ದಿಮೆಯನ್ನು

ನಡೆಸಲು ಪರವಾನಿಗೆ ಯನ್ನು ನೀಡಲಾಗುವುದು.

3. ಪರಿಸರ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

4. ನದಿ ನೀರಿನ ಪರಿವೀಕ್ಷಣೆಯನ್ನು ಕೆಲವೊಂದು ಮುಖ್ಯ ಸ್ಥಳಗಳಲ್ಲಿ ನಡೆಸಲಾಗುತ್ತಿದೆ.

5. ಬೆಂಗಳೂರು ಹಾಗೂ ಮೈಸೂರು ನಗರದಲ್ಲಿನ ಕೆಲವು ಆಯ್ದ ಸ್ಥಳಗಳಲ್ಲಿ ವಾಯುವಿನ ಗುಣಮಟ್ಟವನ್ನು ಮಾಪನ ಮಾಡಲಾಗುತ್ತಿದೆ.

6. ರಾಷ್ಟ್ರೀಯ ನದಿ ಸಂರಕ್ಷಣಾ ಯೋಜನೆಯಡಿಯಲ್ಲಿ ನದಿಗಳ ತೀರದಲ್ಲಿನ 8 ನಗರಗಳಲ್ಲಿ ಕಡಿಮೆ ವೆಚ್ಚದ ಶೌಚಾಲಯಗಳು, ಕೊಳಚೆ ನೀರಿನ ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಸೂಕ್ತ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ.

7. ಮಂಡಳಿಯಲ್ಲಿ ಸ್ಥಾಪಿಸಲಾಗಿರುವ ಪರಿಸರ ತರಬೇತಿ ಸಂಸ್ಥೆಯಿಂದ ಪರಿಸರ ತರಬೇತಿಯನ್ನು ಮಂಡಳಿಯ ಅಧಿಕಾರಿಗಳಿಗೆ, ಸರ್ಕಾರಿ ಅಧಿಕಾರಿಗಳಿಗೆ, ಉದ್ದಿಮೆದಾರರಿಗೆ, ಹಾಗೂ ಎನ್‌ಜಿಓ ಗಳಿಗೆ ನೀಡಲಾಗುತ್ತಿದೆ.

8. ಉದ್ದಿಮೆಗಳನ್ನು ಸೂಕ್ತ ಜಾಗಗಳಲ್ಲಿ ಸ್ಥಾಪಿಸುವುದಕ್ಕಾಗಿ ಜೋನಿಂಗ್ ಅಟ್ಲಾಸ್‌ಗಳನ್ನು ಜಿಲ್ಲೆಗಳಿಗೆ ತಯಾರಿಸುವುದು.

9. ಸಮೂಹದಲ್ಲಿರುವ ಸಣ್ಣ ಉದ್ದಿಮೆಗಳಿಗೆ ಸಾಮಾನ್ಯ ಶುದ್ಧೀಕರಣ ಘಟಕಗಳನ್ನು ಅಳವಡಿಸಲು ಉತ್ತೇಜನ ನೀಡಲಾಗುತ್ತಿದೆ.

10. ಸಂಸ್ಕರಿಸಿದ ನೀರು ಮರುಬಳಕೆ ಮಾಡಲು ಹಾಗೂ ತ್ಯಾಜ್ಯ ವಸ್ತುಗಳಿಂದ ಉಪಯುಕ್ತ ವಸ್ತುಗಳನ್ನು ಪಡೆಯುವುದು ಮತ್ತು ಕ್ಲೀನರ್ ಟೆಕ್ನಾಲಜಿ ಬಳಸುವುದನ್ನು ಉದ್ದಿಮೆಗಳು ಅಳವಡಿಸಲು ತಿಳುವಳಿಕೆ ನೀಡಲಾಗುತ್ತಿದೆ.

ಆ) ರಾಜ್ಯದಲ್ಲಿ ಮುಖ್ಯವಾಗಿ ಕೆಳಕಂಡ ಮೂಲಗಳಿಂದ ಪರಿಸರ ಮಾಲಿನ್ಯ ಉಂಟಾಗುತ್ತಿದೆ.

—ಕೈಗಾರಿಕೆಗಳಿಂದ ವಿಸರ್ಜಿಸುವ ವ್ಯರ್ಥ ಪದಾರ್ಥಗಳು.

—ಪುರಸಭೆ ಮತ್ತು ನಗರ ಸಭೆಗಳಲ್ಲಿ ಗೃಹ ಕೃತ್ಯಗಳಿಂದ ಉತ್ಪತ್ತಿಯಾಗುವ ಕೊಳಚೆ ನೀರು.

—ವಾಹನಗಳಿಂದ ಹೊರಹೊಮ್ಮುವ ಹೊಗೆ.

—ಗೃಹಬಳಕೆ, ಹೋಟೆಲ್, ಕಲ್ಯಾಣಮಂದಿರ, ಆಸ್ಪತ್ರೆ ಮತ್ತು ಇತರೆ ವಾಣಿಜ್ಯ ಚಟುವಟಿಕೆಗಳಿಂದ ಉತ್ಪನ್ನವಾಗುವ ಘನವ್ಯರ್ಥ ಪದಾರ್ಥಗಳು.

**ಶ್ರೀ ಎಸ್.ಪಿ. ಮುದ್ದಹನುಮೇಗೌಡ:** ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಉತ್ತರವನ್ನು ಕೊಟ್ಟಿದ್ದಾರೆ. ರಾಜ್ಯದಲ್ಲಿ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಅದಕ್ಕೆ ಅವರು, ಸುಮಾರು ಹತ್ತು ಕಾರ್ಯಕ್ರಮಗಳಿವೆ ಎನ್ನುವುದರ ಜೊತೆಗೆ ಹಾಲಿ ಇರತಕ್ಕಂಥ ಮೂರು ಕಾಯಿದೆಗಳಡಿಯಲ್ಲಿ ಕ್ರಮವನ್ನು ಜರುಗಿಸಲಾಗುತ್ತಿದೆ ಎನ್ನುವ ಮಾತನ್ನು ಹೇಳಿದ್ದಾರೆ. ಇವತ್ತು ನಮ್ಮ ರಾಜ್ಯದಲ್ಲಿ ಈ ಪರಿಸರ ಮಾಲಿನ್ಯವನ್ನು ತಡೆಗಟ್ಟುವಲ್ಲಿ ಸರ್ಕಾರ ಸಂಪೂರ್ಣವಾಗಿ ವಿಫಲವಾಗಿದೆ ಎನ್ನುವ ಮಾತನ್ನು ನಾನು ಹೇಳುತ್ತಾ, ಇವತ್ತು ನೀವು ಜಲ ಮತ್ತು ವಾಯು ಮಾಲಿನ್ಯವನ್ನು ನಿಯಂತ್ರಿಸಲು ಜಲ ಹಾಗೂ ವಾಯು ಮಾಲಿನ್ಯ ನಿಯಂತ್ರಣ ಕಾಯಿದೆ ಹಾಗೂ ಪರಿಸರ ಸಂರಕ್ಷಣಾ ಕಾಯಿದೆಯಡಿಯಲ್ಲಿ ಕ್ರಮಗಳನ್ನು ಜರುಗಿಸಲಾಗುತ್ತದೆ ಎನ್ನುವ ಮಾತನ್ನು ತಾವು ಹೇಳಿದ್ದೀರಿ. ಏನು ಕ್ರಮವನ್ನು ಜರುಗಿಸಿದ್ದೀರಿ ? How many cases you have lodged against pollution and in

how many cases, conviction is awarded ?

**ಶ್ರೀ ಎ.ಬಿ. ಪಾಟೀಲ್ :** ಮಾನ್ಯ ಅಧ್ಯಕ್ಷರೇ, ಕರ್ನಾಟಕ ಸರ್ಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಮೂಲಕ ಮಾಲಿನ್ಯವನ್ನು ಉಂಟು ಮಾಡತಕ್ಕಂಥ ಕೈಗಾರಿಕೆಗಳ ಮೇಲೆ ಕ್ರಮಗಳನ್ನು ಕೈಗೊಳ್ಳುತ್ತಿದೆ. ಈ ದೇಶ ಮತ್ತು ರಾಜ್ಯದಲ್ಲಿ ಪರಿಸರದ ಪ್ರಶ್ನೆ ಸುಮಾರು ಹತ್ತು ವರ್ಷಗಳಿಂದೀಚೆಗೆ ಬಂದಿದೆ. ಉದ್ದಿಮೆಗಳು ಮತ್ತು ನಗರಗಳು ಬೆಳೆಯುತ್ತಿರುವುದನ್ನು ಕೂಡ ತಾವು ನೋಡಿದ್ದೀರಿ. ಸುಮಾರು ವರ್ಷಗಳಿಂದ ಸ್ಥಾಪನೆಯಾದಂಥ ಉದ್ದಿಮೆಗಳಿಗೆ ಪರಿಸರ ಪ್ರಜ್ಞೆ ಇಲ್ಲದಿರುವುದರಿಂದ ನಮ್ಮ ಸರ್ಕಾರ ನಿಯಂತ್ರಣ ಮಂಡಳಿಯ ಮೂಲಕ ಕ್ರಮಗಳನ್ನು ಕೈಗೊಳ್ಳುತ್ತಿದೆ. ಅದಕ್ಕೆ ಸಾಕಷ್ಟು ಕಾರ್ಯಕ್ರಮಗಳನ್ನು ಕೂಡ ನಾವು ಹಾಕಿದ್ದೇವೆ. ನಾನು ಈ ಇಲಾಖೆಯನ್ನು ವಹಿಸಿಕೊಂಡ ಮೇಲೆ ಪರಿಸರವಾದಿಗಳ, ಹೋಟೆಲ್ ಮಾಲೀಕರುಗಳ, ಕೈಗಾರಿಕೋದ್ಯಮಿಗಳ ಸಭೆ ಕರೆದು ಮಾತನಾಡಿದ್ದೇನೆ. ಇದಕ್ಕೆ ಕೆಲವು ವಿರೋಧಗಳೂ ಕೂಡ ಬರುತ್ತಿವೆ. ಆದರೆ ಕಡ್ಡಾಯವಾಗಿ ಮಾಡಬೇಕಾದುದು ನಮ್ಮ ಕರ್ತವ್ಯ. ಅದು ಬೆಂಗಳೂರು ನಗರದಲ್ಲಿರಬಹುದು. ಅಥವಾ ಉಳಿದ ಏಳು ನಗರಸಭೆಗಳಲ್ಲಿರಬಹುದು, ಪರಿಸರ ಹಾಳಾಗದಂತೆ ನಾವು ಕಟ್ಟುನಿಟ್ಟಿನ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ಉದಾಹರಣೆಗೆ ಹೇಳುವುದಾದರೆ, ಇವತ್ತು ಬೆಂಗಳೂರು ನಗರದಲ್ಲಿ ಯಾವ ಮನುಷ್ಯನೂ ಓಡಾಡಲು ಸಾಧ್ಯವಿಲ್ಲದಂತಾಗಿದೆ. ಆಟೋರಿಕ್ಷಾಗಳಿಂದ ಹೆಚ್ಚಿನ ಹೊಗೆ ಬರುವುದರಿಂದ ಅದರ ಬಗ್ಗೆ ಯಾವ ಕ್ರಮವನ್ನು ತೆಗೆದುಕೊಳ್ಳಬೇಕೆಂಬ ಬಗ್ಗೆ ಈಗಾಗಲೇ ಪೋಲೀಸ್ ಇಲಾಖೆ ಮತ್ತು ಟ್ರಾನ್ಸ್ಪೋರ್ಟ್ ಕಮೀಷನರ್‌ರವರ ಜೊತೆ ಒಂದು ಸಭೆ ಮಾಡಿ ಆಟೋರಿಕ್ಷಾಗಳಿಂದ ಸ್ಮೋಕ್‌ಲೆಸ್ ಬರುವಂಥ ಕ್ರಮವನ್ನು ಕೂಡ ಸರ್ಕಾರ ತೆಗೆದುಕೊಳ್ಳುತ್ತಿದೆ. ಅದೂ ಅಲ್ಲದೆ ಬಿ.ಡಬ್ಲ್ಯು.ಎಸ್. ಎಸ್.ಬಿ.ಯಿಂದ ಸೀವೇಜ್ ವಾಟರ್ ಕೆರೆಗೆ ಹೋಗುವಂಥ ಪರಿಸ್ಥಿತಿ ಇವತ್ತು ಇದೆ. ಈಗಾಗಲೇ ಬಿ.ಡಬ್ಲ್ಯು.ಎಸ್.ಎಸ್.ಬಿ.ಯವರು ಮೂರು ಎಫ್ಲ್ಯೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್‌ಗಳನ್ನು ಹಾಕಿದ್ದಾರೆ. ಇನ್ನೂ ನಾಲ್ಕೈದು ಪ್ಲಾಂಟ್‌ಗಳನ್ನು ಹಾಕಲು ಕೂಡ ಅವರು ಯೋಜನೆ ಮಾಡಿದ್ದಾರೆ. ಪೀಣ್ಯ ಇಂಡಸ್ಟ್ರೀಯಲ್ ಎಸ್ಟೇಟ್‌ನಲ್ಲಿ ಇದುವರೆಗೂ ಕಾಮನ್ ಎಫ್ಲ್ಯೂಯೆಂಟ್ ಟ್ರೀಟ್‌ಮೆಂಟ್ ಪ್ಲಾಂಟ್ ಇರಲಿಲ್ಲ. ಅಲ್ಲಿ ನಾವು ಎಲ್ಲಾ ಉದ್ಯಮಿಗಳ ಸಭೆ ಕರೆದು ತಿಳಿಸಿದಾಗ, ಅವರು ತಕ್ಷಣವೇ ಇದನ್ನು ಮಾಡಬೇಕೆಂದು ಒಪ್ಪಿಕೊಂಡಿದ್ದಾರೆ.

**ಶ್ರೀ ಎಸ್.ಪಿ. ಮುದ್ದಹನುಮೇಗೌಡ :** ನಾನು ನಿರ್ದಿಷ್ಟವಾಗಿ ಪ್ರಶ್ನೆ ಹಾಕಿದ್ದೇನೆ. ಪೊಲ್ಯೂಷನ್ ಕಂಟ್ರೋಲ್ ವಾಯ್‌ಲೇಷನ್‌ಗಾಗಿ ನೀವು ಎಷ್ಟು ಕೇಸುಗಳನ್ನು ಹಾಕಿದ್ದೀರಿ. ಯಾವುದಾದರೂ ಕನ್ವಿಕ್ಷನ್ ಆಗಿದೆಯೇ ?

**ಅಧ್ಯಕ್ಷರು :** ಅವರು ಎಷ್ಟು ಮಾಡಿದರೋ ಏನೋ ಅದು ಬೇರೆ ವಿಷಯ. ತಾವು ಮ್ಯಾಜಿಸ್ಟ್ರೇಟ್ ಆಗಿದ್ದೀರಿ. ನೀವು ಮ್ಯಾಜಿಸ್ಟ್ರೇಟ್ ಆಗಿದ್ದಾಗ ಇಂಥ ಕೇಸುಗಳು ಬಂದಿದ್ದವೇ ? ನೀವು ಎಷ್ಟು ಕೇಸ್‌ನಲ್ಲಿ ಕನ್ವಿಕ್ಷನ್ ಕೊಟ್ಟಿದ್ದೀರಿ ಎನ್ನುವುದನ್ನು ಸ್ವಲ್ಪ ಹೇಳಿ.

**SRI. S.P. MUDDAHANUME GOWDA :** Pollution is a problem not only in Bangalore, but in the entire state.

ಇಂಥಾದ್ದನ್ನು ತಡೆಗಟ್ಟುವುದಕ್ಕೋಸ್ಕರ ನೀವು ಒಂದು ಸಣ್ಣ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಎಂದು ಇಟ್ಟುಕೊಂಡಿದ್ದೀರಿ. ಬೆಂಗಳೂರಿನಲ್ಲಿ ಯಾವ ರೀತಿ ಮಾಲಿನ್ಯವಾಗುತ್ತಿದೆ ಎನ್ನುವುದನ್ನು

ತಾವೇ ನೋಡುತ್ತಿದ್ದೀರಿ. ಅದು ವಾಹನಗಳಿಂದ ಆಗುತ್ತಿರಬಹುದು, ಕಾರ್ಖಾನೆಗಳಿಂದ ಆಗುತ್ತಿರಬಹುದು.

**MR.SPEAKER :** You are only referring to environmental pollution.

**ಶ್ರೀ ಎಸ್.ಪಿ. ಮುದ್ದಹನುಮೇಗೌಡ :** ಸರ್ಕಾರಕ್ಕೆ ಒಂದು ಸಲಹೆ ಕೊಡುತ್ತೇನೆ. Unless you enforce the stringent laws, you cannot solve this problem.

ದಯಾಮಾಡಿ ಈ ಸಮಸ್ಯೆಯನ್ನು ಪರಿಹಾರ ಮಾಡಲು ಈಗ ಇರುವ ಕಾಯಿದೆಗಳ ಜೊತೆಗೆ ಸ್ಟ್ರಿಂಜೆಂಟ್ ಲಾಸ್‌ಗಳನ್ನು ತಂದು ಅವನ್ನು ಎಕ್ಸಿಕ್ಯೂಷನ್ ಲೆವೆಲ್‌ನಲ್ಲಿ ಬಹಳ ಸ್ಟ್ರಿಂಜೆಂಟಾಗಿ ನೀವು ಮಾಡದೇ ಹೋದರೆ ಬಹಳ ಕಷ್ಟವಾಗುತ್ತದೆ.

**ಅಧ್ಯಕ್ಷರು :-** ಒಳ್ಳೆಯ ಸಲಹೆ ಮಾಡಿದ್ದೀರಿ.

**ಶ್ರೀ ಎ.ಬಿ. ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಬೇಕಾದ ಕ್ರಮವನ್ನು ಅನುಸರಿಸದೇ ಇರುವಂಥ ಸುಮಾರು 225ಕ್ಕಿಂತ ಹೆಚ್ಚಿನ ಕೇಸುಗಳನ್ನು ದಾಖಲಾತಿ ಮಾಡಿದ್ದೇವೆ. ಇವೆಲ್ಲವೂ ಕೋರ್ಟಿನಲ್ಲಿ ಇವೆ. ಆ ಕೋರ್ಟಿನಲ್ಲಿ ಇರುವಂಥ ಕೇಸುಗಳು ಡಿಸ್ಪೆಡ್ ಆದಕೂಡಲೇ ಅದರ ಬಗ್ಗೆ ಕೂಡ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತಿದ್ದೇವೆ. ನಾನು ಇಲಾಖೆಯನ್ನು ವಹಿಸಿಕೊಂಡ ನಂತರ ಮೈಸೂರು, ಬೆಂಗಳೂರು ಮತ್ತು ಬೀದರ್‌ನಲ್ಲಿರುವಂಥ ಎಲ್ಲಾ ಕೈಗಾರಿಕೆಗಳಲ್ಲಿ ಪರಿಸರ ಮಾಲಿನ್ಯ ಉಂಟುಮಾಡುತ್ತಿದೆಯೇ ಎಂದು ತಿಳಿಯುವ ಸಲುವಾಗಿ ಪ್ರತ್ಯಕ್ಷ ಭೇಟಿಕೊಟ್ಟಿದ್ದೇನೆ. ಕೆಲವೊಂದು ಕೈಗಾರಿಕೆಗಳಿಂದ ಆಗುವಂಥ ಪರಿಸರ ಮಾಲಿನ್ಯವನ್ನು ತಡೆಗಟ್ಟುವ ಸಲುವಾಗಿ ರೆಕ್ಟಿಫೈ ಕೂಡ ಮಾಡುತ್ತಿದ್ದಾರೆ.

**ಶ್ರೀ ಬಿ.ಬಿ. ಶಿವಪ್ಪ (ಸಕಲೇಶಪುರ) :** ಮಾನ್ಯ ಅಧ್ಯಕ್ಷರೆ, ಸ್ಟೋನ್ ಕ್ರಷರ್ ಬಗ್ಗೆ ಕಳೆದ ಸಲ ಇದೇ ಸದನದಲ್ಲಿ ಪ್ರಸ್ತಾಪ ಮಾಡಿದ್ದೆ. ಸ್ಟೋನ್ ಕ್ರಷರ್ ಕೆಲಸವನ್ನು ನಿಲ್ಲಿಸಬೇಕು, ಅಲ್ಲಿ ಮಾಡುತ್ತಿರುವುದು ಸರಿಯಲ್ಲವೆಂದು ತಾವು ಆದೇಶ ಕೊಟ್ಟಿದ್ದೀರಿ. ಹಾಗೆಯೇ ಸ್ಟೋನ್ ಕ್ರಷರ್ ಕೆಲಸವನ್ನು ನಿಲ್ಲಿಸಬೇಕೆಂದು ಸಂಬಂಧಪಟ್ಟ ಕಾರ್ಯದರ್ಶಿಯವರು, ಪರಿಸರ ಇಲಾಖೆಯವರು ಆದೇಶ ಕೊಟ್ಟಿದ್ದಾರೆ. ಮಾನ್ಯ ಸೋಮಣ್ಣನವರೂ ಕೂಡ ಇದರ ಬಗ್ಗೆ ನಿಲ್ಲಿಸಬೇಕೆಂದು ಹೇಳಿದ್ದಾರೆ. ಗ್ರಾಮಸ್ಥರು ಹೈಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆದರೂ ಕೂಡ ಅಲ್ಲಿ ಕೆಲಸ ನಡೆಯುತ್ತಿದೆ. ಇಷ್ಟೆಲ್ಲಾ ಸರ್ಕಾರಿ ಆಜ್ಞೆ ಆಗಿ ಸ್ಟೋನ್ ಕ್ರಷರ್ ಕೆಲಸ ನಡೆಯುತ್ತಲೇ ಇದೆ. ಇವತ್ತಿಗೂ ಕೂಡ ನಡೆಯುತ್ತಿದೆ. ಇದನ್ನು ಮಾನ್ಯ ಮಂತ್ರಿಗಳಿಂದ ಏಕೆ ನಿಲ್ಲಿಸುವುದಕ್ಕೆ ಆಗಲಿಲ್ಲ ?

**ಶ್ರೀ ಎ.ಬಿ.ಪಾಟೀಲ್ :** ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಹಿರಿಯ ಸದಸ್ಯರಾದ ಮಾನ್ಯ ಶಿವಪ್ಪನವರು ಇವತ್ತು ನನಗೆ ಹೇಳಿದ್ದರು. ಅದಕ್ಕೆ ತಕ್ಷಣ ಕ್ರಮ ತೆಗೆದು ಕೊಂಡು ಬಂದ್ ಮಾಡಿದ್ದೇವೆ. ಪುನಃ ಅದನ್ನು ಏನಾದರೂ ಪ್ರಾರಂಭ ಮಾಡಿದರೆ ಸರ್ಕಾರದಿಂದ ನಾವು ತಕ್ಷಣ ಕ್ರಮ ತೆಗೆದುಕೊಳ್ಳುತ್ತೇವೆ.

ಜಿಲ್ಲಾ ಪಂಚಾಯತಿಗಳಲ್ಲಿ ಪೀಠೋಪಕರಣಗಳನ್ನು ಖರೀದಿಸುವ ಬಗ್ಗೆ ಇರತಕ್ಕ ನೀತಿ ನಿಯಮಗಳು

224(1519)

**ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ)** ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ